VIDYAVARDHAKA LAW COLLEGE
LIBRARY

**0102/0324**

**I Semester 3 Year LL.B./III Semester 5 Year B.A. LL.B./B.B.A.LL.B.**
**Examination, June/July 2016**
**CONSTITUTIONAL LAW**

Duration : 3 Hours Max. Marks : 100

**Instructions :** 1. Answer Q. No. **9** and **any 5** of the **remaining** questions.

2. Q. No. **9** carries **20** marks and the **remaining** questions carry **16** marks **each**.

3. Answers should be written **either** in **English** or in **Kannada completely**.

Q. No. 1. Examine the salient features of the Constitution of India. Marks : 16

ಭಾರತ ಸಂವಿಧಾನದ ಮುಖ್ಯ ಲಕ್ಷಣಗಳನ್ನು ಪರೀಕ್ಷಿಸಿ.

Q. No. 2. Discuss in brief the fundamental freedoms guaranteed to the citizens under Article 19 of the Constitution of India. Marks : 16

ಸಂವಿಧಾನದಲ್ಲಿ ಅನುಚ್ಛೇದ 19ರಲ್ಲಿ ನಾಗರಿಕರಿಗಿರುವ ಮೂಲಭೂತ ಸ್ವಾತಂತ್ರ್ಯದ ಹಕ್ಕುಗಳನ್ನು ಸಂಕ್ಷಿಪ್ತವಾಗಿ ಚರ್ಚಿಸಿರಿ.

Q. No. 3. "Directive principles of State Policy is not only fundamental in governance of the country but also a charter of social reformation". Describe. Marks : 16

''ರಾಜ್ಯ ನಿರ್ದೇಶನಾತ್ಮಕ ತತ್ವಗಳು ರಾಷ್ಟ್ರದ ಆಡಳಿತಕ್ಕೆ ಮೂಲಭೂತವಾಗಿರುವುದಷ್ಟೇ ಅಲ್ಲ, ಅದು ಒಂದು ಸಾಮಾಜಿಕ ಬದಲಾವಣೆಯ ಶಾಸನವೂ ಹೌದು''. ವರ್ಣಿಸಿ.

Q. No. 4. "No person shall be deprived of his life and personal liberty except according to the procedure established by law". Discuss with reference to decided cases. Marks : 16

''ಕಾನೂನಿನ ಮೂಲಕ ನಿಗದಿಯಾದ ಪ್ರಕ್ರಿಯೆಗನುಸಾರವಾಗಿ ಅಲ್ಲದೆ ಬೇರೆ ಯಾವ ಕಾರಣದಲ್ಲೂ ವ್ಯಕ್ತಿಯ ಪ್ರಾಣ ಹಾನಿ ಮತ್ತು ವ್ಯಕ್ತಿ ಸ್ವಾತಂತ್ರ್ಯವಿಲ್ಲದಂತೆ ಮಾಡತಕ್ಕದ್ದಲ್ಲ''. ಈ ಉಲ್ಲೇಖವನ್ನು ವಿಷದವಾಗಿ ನಿರ್ಧರಿತ ಪ್ರಕರಣಗಳೊಂದಿಗೆ ಚರ್ಚಿಸಿ.

Q. No. 5. Give a brief account of the liability of the government for breach torts committed by servants in the course of their employment. Marks : 16

ಸರ್ಕಾರೀ ನೌಕರರು ಸೇವಾವಧಿಯಲ್ಲಿ ಮಾಡಿದ ಅಪಕೃತ್ಯಗಳಲ್ಲಿನ ಸರ್ಕಾರದ ಬಾಧ್ಯತೆಯ ಸಂಕ್ಷಿಪ್ತ ವಿವರಣೆಯನ್ನು ನೀಡಿರಿ.

P.T.O.

Q. No. 6. Critically examine the emergency provisions in the Constitution of India. Marks : 16

ಸಂವಿಧಾನದಲ್ಲಿರುವ ತುರ್ತು ಪರಿಸ್ಥಿತಿಯ ಉಪಬಂಧಗಳನ್ನು ವಿಮರ್ಶಾತ್ಮಕವಾಗಿ ಪರೀಕ್ಷಿಸಿ.

Q. No. 7. Examine the constitutional remedies for the enforcement of Fundamental Rights under the Constitution of India. Marks : 16

ಭಾರತದ ಸಂವಿಧಾನದಡಿಯಲ್ಲಿ ಮೂಲಭೂತ ಹಕ್ಕುಗಳನ್ನು ಜಾರಿಗೊಳಿಸಲು ಇರುವ ಸಾಂವಿಧಾನಿಕ ಪರಿಹಾರಗಳಾವುವು ಎಂಬುದನ್ನು ಪರೀಕ್ಷಿಸಿ.

Q. No. 8. Write short notes on **any two** of the following : Marks : 2×8=16

ಈ ಕೆಳಗಿನ ಯಾವುದಾದರೂ **ಎರಡಕ್ಕೆ** ಟಿಪ್ಪಣಿ ಬರೆಯಿರಿ :

a) Privileges of members of Parliament
ಸಂಸತ್ ಸದಸ್ಯರುಗಳಿಗಿರುವ ಉನ್ಮುಕ್ತಿಗಳು

b) Doctrine of Pleasure
ಇಚ್ಛಾ ಸಿದ್ಧಾಂತ

c) Public Service Commission.
ಲೋಕ ಸೇವಾ ಆಯೋಗ.

Q. No. 9. Solve **any two** of the following problems : Marks : 2×10=20

ಈ ಕೆಳಗಿನ ಯಾವುದಾದರೂ **ಎರಡು** ಸಮಸ್ಯೆಗಳನ್ನು ತೀರ್ಮಾನಿಸಿ :

a) The Petitioner Vedasree had obtained the qualifying marks in her Pre-University Examination. She had applied for dental college seat. In general category she could not get a seat as there were others with higher marks. Among the applicants for the reserved quota of scheduled castes and scheduled tribes there was no one with qualifying marks. In order to accommodate the reserve category the qualifying marks were lowered by a Government order, Vedasree challenged this Government-order on ground of discrimination and violation of her fundamental right by filing a writ petition. Will she succeed ? Decide.

ವೇದಶ್ರೀ ಎಂಬ ಅರ್ಜಿದಾರಳು ತನ್ನ ಪದವಿ ಪೂರ್ವ ಪರೀಕ್ಷೆಗಳಲ್ಲಿ ಅರ್ಹತಾ ಅಂಕಗಳನ್ನು ಗಳಿಸಿದ್ದರು. ಡೆಂಟಲ್ ಕಾಲೇಜಿನಲ್ಲಿ ಒಂದು ಪ್ರವೇಶಕ್ಕಾಗಿ ಅರ್ಜಿ ಸಲ್ಲಿಸಿದ್ದರು. ಇತರ ಅಭ್ಯರ್ಥಿಗಳು ಇವರಿಗಿಂತ ಹೆಚ್ಚಿನ ಅರ್ಹತಾ ಅಂಕಗಳನ್ನು ಗಳಿಸಿದ್ದ ಕಾರಣ ಅವರಿಗೆ ಸಾಮಾನ್ಯ ವರ್ಗದಲ್ಲಿ ಪ್ರವೇಶ ನಿರಾಕರಿಸಲಾಯಿತು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಅಭ್ಯರ್ಥಿಗಳಿಗಾಗಿ ಕಾಯ್ದಿರಿಸಿದ ಪಟ್ಟಿಯಲ್ಲಿ ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳಿಗೆ ಅರ್ಹತಾ ಅಂಕಗಳಿಲ್ಲ ಎಂಬ ಕಾರಣದಲ್ಲಿ ಯಾವುದೇ ಪ್ರವೇಶ ಆಗಿರಲಿಲ್ಲ. ಈ ವರ್ಗದ ಅಭ್ಯರ್ಥಿಗಳಿಗೆ ಪ್ರವೇಶ ಅರ್ಹತೆ ಕಲ್ಪಿಸುವುದಕ್ಕಾಗಿ ಅರ್ಹತಾ ಅಂಕಗಳನ್ನು ಕಡಿಮೆಗೊಳಿಸಿ ಸರ್ಕಾರ ಆದೇಶ ಹೊರಡಿಸಿತು. ವೇದಶ್ರೀಯವರು ಈ ಸರ್ಕಾರಿ ಆದೇಶವು ತಾರತಮ್ಯತೆಯಿಂದ ಕೂಡಿದ್ದು ಮೂಲಭೂತ ಹಕ್ಕಿನ ಉಲ್ಲಂಘನೆಯಾಗಿದೆ ಎಂಬ ಕಾರಣದಲ್ಲಿ ರಿಟ್ ಅರ್ಜಿಯ ಮೂಲಕ ಪ್ರಶ್ನಿಸುತ್ತಾರೆ. ಅವರು ಜಯಶಾಲಿಯಾಗುವರೇ ? ತೀರ್ಮಾನಿಸಿ.

b) Varun was the General Manager of Long Life Insurance Co. He was prosecuted for criminal breach of trust in respect of certain moneys on the company under Sec. 409 of the Indian Penal code and was convicted. Subsequently Varun was prosecuted for an offence under the Provisions of Indian Insurance Act. Varun the accused, challenged the prosecution. Will he succeed ? Decide.

ವರುಣ್ ಎಂಬವರು ಲೋಂಗ್ ಲೈಫ್ ಇನ್ಶೂರೆನ್ಸ್ ಕಂಪೆನಿಯಲ್ಲಿ ಪ್ರಧಾನ ವ್ಯವಸ್ಥಾಪಕರಾಗಿರುತ್ತಾರೆ. ಹಣ ದುರುಪಯೋಗ ಆಪಾದನೆ ಮೇಲೆ ಭಾರತೀಯ ದಂಡ ಸಂಹಿತೆ ಕಲಂ409ರ ಪ್ರಕಾರ ಅವರ ವಿರುದ್ಧ ಮೊಕದ್ದಮೆ ಹೂಡಿ ಅಪರಾಧಿಕ ಪ್ರಕ್ರಿಯೆಗೆ ಒಳಪಡಿಸಿ ಅವರನ್ನು ನ್ಯಾಯಾಲಯವು ಶಿಕ್ಷೆಗೆ ಒಳಪಡಿಸಿತು. ತದನಂತರ ಭಾರತೀಯ ವಿಮಾ ಕಾಯ್ದೆಯ ಉಲ್ಲಂಘನೆಗಾಗಿ ಅವರ ಮೇಲೆ ಪ್ರಕರಣ ಜರುಗಿಸಿ ಮೊಕದ್ದಮೆ ದಾಖಲಿಸಲಾಯಿತು. ಆಪಾದಿತನಾದ ವರುಣ್ ಈ ಅಪರಾಧಿಕ ಪ್ರಕರಣವನ್ನು ಪ್ರಶ್ನಿಸುತ್ತಾರೆ. ಜಯಶಾಲಿಯಾಗುವರೇ ? ನಿರ್ಧರಿಸಿ.

c) The Government of Tamil Nadu by an order banned leases for quarrying of black granite to Private persons reserving them only for Government corporations. The said order was passed under the Mines and Minerals (Regulation and Development) Act, 1957. The said order was challenged as unconstitutional. Decide.

ತಮಿಳುನಾಡು ಸರಕಾರವು ಒಂದು ಸರ್ಕಾರೀ ಆದೇಶದ ಮೂಲಕ ಕಪ್ಪು ಗ್ರಾನೈಟ್‌ನಲ್ಲಿ ಗಣಿ ಉದ್ಯಮವನ್ನು ಖಾಸಗಿ ವ್ಯಕ್ತಿಗಳಿಗೆ ಗೇಣಿ ಮಾಡುವುದನ್ನು ನಿಷೇಧಿಸಿ ಕೇವಲ ಸರ್ಕಾರೀ ಸಂಸ್ಥೆಗಳಿಗೆ ಕಾಯ್ದಿರಿಸಿತು. ಈ ಆದೇಶವನ್ನು ಗಣಿ ಮತ್ತು ಖನಿಜ ವಸ್ತು (ನಿರ್ಬಂಧ ಮತ್ತು ಉತ್ತೇಜನೆ) ಕಾಯ್ದೆ, 1957ರ ಪ್ರಕಾರ ಮಾಡಲಾಯಿತು. ಈ ಆದೇಶವನ್ನು ಅಸಂವಿಧಾನಾತ್ಮಕವೆಂದು ಪ್ರಶ್ನಿಸಲಾಯಿತು. ತೀರ್ಮಾನಿಸಿ.

---